ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ಸಂಖ್ಯೆ: ಕವಿಪ್ರನಿನಿ/ಬಿ103/25301/2021-22**

ದಿನಾಂಕ : 17 AUG 2022

ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
ಬೆಸ್ಕಾಂ-ಬೆಂಗಳೂರು (ದಕ್ಷಿಣ)/ರಾಮನಗರ/ತುಮಕೂರು/ದಾವಣಗೆರೆ/ಕೋಲಾರ.
ಸೆಸ್ಕ್- ಮೈಸೂರು/ಮಂಡ್ಯ/ಹಾಸನ/ಚಾಮರಾಜನಗರ-ಕೊಡಗು.
ಮೆಸ್ಕಾಂ-ಮಂಗಳೂರು/ಉಡುಪಿ/ಶಿವಮೊಗ್ಗ/ಚಿಕ್ಕಮಗಳೂರು.
ಹೆಸ್ಕಾಂ-ಹುಬ್ಬಳ್ಳಿ/ಶಿರಸಿ/ಹಾವೇರಿ/ಬೆಳಗಾವಿ/ಚಿಕ್ಕೋಡಿ/ವಿಜಯಪುರ/ಬಾಗಲಕೋಟೆ.
ಜೆಸ್ಕಾಂ- ಕಲಬುರಗಿ/ಬೀದರ್/ರಾಯಚೂರು/ಬಳ್ಳಾರಿ/ಕೊಪ್ಪಳ.

ಮಾನ್ಯರೆ,

ವಿಷಯ : 10ನೇ ತರಗತಿಗಿಂತ ಕೆಳಗಿನ ವಿದ್ಯಾರ್ಹತೆ ಹೊಂದಿರುವ ಅಥವಾ ಅನಕ್ಷರಸ್ಥ ಮಹಿಳಾ ಅಭ್ಯರ್ಥಿಗಳನ್ನು ಅನುಕಂಪ ಆಧಾರದ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಉಲ್ಲೇಖ :
1. ನಿಗಮದ ದಿನಾಂಕ: 18.01.2022 ರ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ103/25308/20021-22.
2. ಶ್ರೀಮತಿ.ಸುಮಿತ್ರಾ ಕೋಂ ದಿll.ಶಿವಕುಮಾರ್.ಸಿ.ಬಿ., ಬೆಂಗಳೂರು ಇವರು ಸಲ್ಲಿಸಿರುವ ದಿನಾಂಕ: 26.07.2022 ರ ಮನವಿ ಪತ್ರ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ, ದಿನಾಂಕ: 18.01.2022 ರ ಸುತ್ತೋಲೆಯನ್ವಯ ಅನುಕಂಪ ಆಧಾರದ ನೇಮಕಾತಿಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ಹತ್ತನೇ ತರಗತಿಯಲ್ಲಿ ಅನುತ್ತೀರ್ಣತೆ ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಅಥವಾ ಅನಕ್ಷರಸ್ಥರಾಗಿದ್ದಲ್ಲಿ, ಸದರಿಯವರುಗಳನ್ನು ಕಾವಲುಗಾರ ಅಥವಾ ಮಾಲಿ ದರ್ಜೆ-2 ಹುದ್ದೆಯ ನೇಮಕಾತಿಗೆ ಪರಿಗಣಿಸಬೇಕಿರುತ್ತದೆ. ಒಂದು ವೇಳೆ ಸದರಿ ಹುದ್ದೆಗಳು ಖಾಲಿಯಿಲ್ಲದಿದ್ದ ಪಕ್ಷದಲ್ಲಿ ಕಚೇರಿ ಪರಿಚಾರಕ ದರ್ಜೆ-2 ರ ಹುದ್ದೆಗೆ ಪರಿಗಣಿಸಿ ನೇಮಕಾತಿಗೊಳಿಸತಕ್ಕದೆಂದು ತಿಳಿಸಲಾಗಿರುತ್ತದೆ.

ಕಾವಲುಗಾರ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ನೌಕರರು ಬೆಳಗ್ಗೆ ಮತ್ತು ರಾತ್ರಿ ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಮಹಿಳಾ ಅಭ್ಯರ್ಥಿಗಳು ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವುದು ಕಷ್ಟಕರವಾಗಿರುತ್ತದೆ ಹಾಗೂ ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ನೌಕರರ ಸುರಕ್ಷತೆಗೆ ಸೂಕ್ತ ಭದ್ರತೆ ಒದಗಿಸುವುದು ನಿಗಮ/ಕಂಪನಿಗಳಿಗೆ ಕಷ್ಟಸಾಧ್ಯವಾಗುವುದರಿಂದ, ಮಹಿಳಾ ನೌಕರರ ಹಿತದೃಷ್ಟಿಯಿಂದ ಹತ್ತನೇ ತರಗತಿಯಲ್ಲಿ ಅನುತ್ತೀರ್ಣತೆ ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಅಥವಾ ಅನಕ್ಷರಸ್ಥರಾಗಿರುವ ಮಹಿಳಾ ಅಭ್ಯರ್ಥಿಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಮಾಲಿ ದರ್ಜೆ-2 ಅಥವಾ ಕಚೇರಿ ಪರಿಚಾರಕ ದರ್ಜೆ-2 ರ ಹುದ್ದೆಗಳಿಗೆ ಪರಿಗಣಿಸಬಹುದೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)